# 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 163/2025

ದಿನಾಂಕ –03.08.2026

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | – | ಕುಮಾರ್ | ಪ್ರಾ.ಸಾ. | – | 04 |
| ತಂದೆ ಹೆಸರು | – | ಸಿದ್ದಪ್ಪ | ಚಾ.ಸಾ. | – | 10 |
| ವಯಸ್ಸು | – | 34 ವರ್ಷ | | | |
| ಉದ್ಯೋಗ | – | Water men, ಗ್ರಾಮ ಪಂಚಾಯಿತಿ | | | |
| ವಾಸ ಸ್ಥಳ | – | ಬೋವಿಹಟ್ಟಿ ಗ್ರಾಮ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ನಾನು ಈ ಮೊದಲು ನೋಡಿರುವುದಿಲ್ಲ. ಈ ಕೇಸಿನ ಚಾಸಾ–11 ಕೆಂಚಪ್ಪ ನನಗೆ ಗೊತ್ತಿರುತ್ತಾರೆ. ಈಗ ನೋಡುತ್ತಿರುವ ಪಂಚನಾಮೆಯಲ್ಲಿಯ ಸಹಿ ನನ್ನದೇ ಇರುತ್ತದೆ. ಸದರಿ ಪಂಚನಾಮೆಯನ್ನು ಈಗ ನಿಪಿ–10 ಎಂದು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ–10(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಈಗ್ಗೆ ಅಂದಾಜು ಒಂದು ವರ್ಷದ ಹಿಂದೆ ಒಂದು ದಿನ ಪೋಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಠಾಣೆಯಲ್ಲಿ ಆ ದಾಖಲೆಗೆ ಸಹಿ ಪಡೆದಿರುತ್ತಾರೆ. ಪೋಲೀಸರು ನನ್ನನ್ನು ಮತ್ತು ಚಾಸಾ–11 ಇವರನ್ನು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯೊಂದಿಗೆ ಎಲ್ಲಿಗೂ ಕರೆದುಕೊಂಡು ಹೋಗಿರುವುದಿಲ್ಲ ಮತ್ತು ಅವಳು ತೋರಿಸಿದ ಘಟನಾ ಸ್ಥಳದ ಸ್ಥಿತಿಗತಿಯ ಬಗ್ಗೆ ಯಾವುದೇ ಸ್ಥಳ ಪಂಚನಾಮೆ ಮಾಡಿರುವುದಿಲ್ಲ ಮತ್ತು ಆರೋಪಿಯ ಹಾಜರುಪಡಿಸಿದ ಯಾವುದೇ ವಸ್ತುವನ್ನು ನಮ್ಮ ಸಮಕ್ಷಮ ಪೋಲೀಸರು ಜಪ್ತುಗೊಳಿಸಿರುವುದಿಲ್ಲ. ಈಗ ನೋಡುತ್ತಿರುವ ಪೋಟೋಗಳಲ್ಲಿ ನಾನು, ಚಾಸಾ–11, ಪೋಲೀಸರು ಮತ್ತು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಕಂಡು ಬರುತ್ತೇವೆ. ಸದರಿ ಪೋಟೋಗಳನ್ನು ಈಗ ನಿಪಿ–11 ರಿಂದ 14 ಎಂದು ಗುರುತಿಸಲಾಯಿತು. ಸದರಿ ಪೋಟೋಗಳನ್ನು ಪೋಲೀಸರು ಈಗ್ಗೆ ಅಂದಾಜು 2 ವರ್ಷದ ಹಿಂದೆ ಒಂದು ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯ ಮನೆಯ ಬಳಿ ಹಾದುಹೋಗುತ್ತಿದ್ದಾಗ ನಮ್ಮನ್ನು

ನಿಲ್ಲಿಸಿ ಪೋಟೋ ತೆಗೆಸಿರುತ್ತಾರೆ. ನಿಪಿ-10 ಎಂದು ಗುರುತಿಸಿದ ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ.

*(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯವನ್ನು ನೀಡಿದ್ದು, ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಮಾನ್ಯ ಸರ್ಕಾರಿ ಅಭಿಯೋಜಕರು ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)*

**– ಪಾಟೀ ಸವಾಲು – ಮಾನ್ಯ ಸರ್ಕಾರಿ ಅಭಿಯೋಜಕರಿಂದ –**

ದಿಃ 10.08.2025 ರಂದು ಬೆಳಿಗ್ಗೆ ಶ್ರೀರಾಂಪುರ ಠಾಣೆಯ ಪಿ.ಐ ರವರು ನನ್ನನ್ನು ಮತ್ತು ಚಾಸಾ-11 ಇವರನ್ನು ನಮ್ಮ ಪಂಚಾಯಿತಿ ಕಾರ್ಯಾಲಯದ ಹಿರಿಯ ಅಧಿಕಾರಿಗಳ ಮುಖಾಂತರ ಠಾಣೆಗೆ ಕರೆಯಿಸಿ ಆ ವೇಳೆಗೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಅಲ್ಲಿ ಇದ್ದು, ಅವಳನ್ನು ತೋರಿಸಿ, ಸದರಿಯವಳು ದಿಃ 08.08.2025 ರಂದು ರಾತ್ರಿ 10.30 ಗಂಟೆ ಸಮಯದಲ್ಲಿ ತನ್ನ ಮಾವನ ಊರುಗೋಲಿನಿಂದ ತನ್ನ ಪತಿ ಗಿರೀಶ್ ಈತನ ತಲೆಗೆ ಹೊಡೆದು ಕೊಲೆ ಮಾಡಿರುವ ಬಗ್ಗೆ ಹೇಳಿದ್ದು, ಅದಕ್ಕೆ ಅನುಗುಣವಾಗಿ ಅವರು ಕರೆದುಕೊಂಡು ಹೋಗುವ ಜಾಗಕ್ಕೆ ಹೋಗಿ, ಅವರು ಹಾಜರುಪಡಿಸುವ ವಸ್ತುವನ್ನು ಜಪ್ತುಗೊಳಿಸಬೇಕಾಗಿದ್ದು, ಅದಕ್ಕೆ ಪಂಚರೆಂದು ಇರುವಂತೆ ನಮಗೆ ಹೇಳಿದ್ದು, ಆಗ ನಾವು ಅದಕ್ಕೆ ಒಪ್ಪಿದ್ದು, ಆಗ ಪೋಲೀಸರು, ಆರೋಪಿ, ನನ್ನನ್ನು ಮತ್ತು ಚಾಸಾ-11 ಇವರನ್ನು ಇಲಾಖಾ ವಾಹನದಲ್ಲಿ ಕರೆದುಕೊಂಡು ಯಾದಘಟ್ಟ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದು, ಆಗ ಆರೋಪಿಯು ವಾಹನ ನಿಲ್ಲಿಸುವಂತೆ ಹೇಳಿ ವಾಹನದಿಂದ ಇಳಿದು ಹೊರಟಿದ್ದು, ಆಗ ನಾವು ಮತ್ತು ಪೋಲೀಸರು ಅವಳ ಹಿಂದೆ ಹೊರಟಿದ್ದು, ಆ ವೇಳೆಗೆ ಆರೋಪಿಯು ಊರಿನಲ್ಲಿ ರಸ್ತೆಗೆ ಹೊಂದಿಕೊಂಡಂತೆ ಇರುವ ಒಂದು ಮನೆಯನ್ನು ತೋರಿಸಿ ಅದೇ ತನ್ನ ಮನೆಯಿರುವುದೆಂದು ಹೇಳಿ, ಆ ಮನೆಯ ಮೂಲೆಯ ಬಳಿ ಕರೆದುಕೊಂಡು ಹೋಗಿ ಅದೇ ಸ್ಥಳದಲ್ಲಿ ತಾನು ತನ್ನ ಗಂಡನಾದ ಗಿರೀಶನ ತಲೆಗೆ ಊರುಗೋಲಿನಿಂದ ಹೊಡೆದಿದ್ದಾಗಿ ಹೇಳಿ ನಂತರ ಆತನು ಬಿದ್ದಾಗ ಅಲಿಲಯೇ ತನ್ನ ಪತಿಗೆ ವಿಷದ ಬಾಟಲಿಯನ್ನು ತಂದು ವಿಷ ಕುಡಿಸಿರುವೆನೆಂದು ಹೇಳಿ ನಂತರ ಮನೆಯ ಇನ್ನೊಂದು ಮೂಲೆಗೆ ಕರೆದುಕೊಂಡು ಹೋಗಿ ಅಲ್ಲಿ ಹೂವಿನ ಗಿಡಗಳ ಮಧ್ಯೆ ಇಟ್ಟಿದ್ದ ಒಂದು ಕೋಲನ್ನು ತಂದು ಹಾಜರುಪಡಿಸಿದ್ದು, ಆಗ ಪೋಲೀರು ಆ ಕೋಲನ್ನು ಮುಂದಿನ ಕ್ರಮಕ್ಕೆಂದು ಜಪ್ತು ಮಾಡಿಕೊಂಡು ಅದರ ಬಗ್ಗೆ ಬೆಳಿಗ್ಗೆ 11.00 ರಿಂದ 12.00 ಗಂಟೆವರೆಗೆ ನಿಪಿ-10 ರಂತೆ ಪಂಚನಾಮೆ ಮಾಡಿ ಅದನ್ನು ಬರೆದುಕೊಂಡು, ಅದಕ್ಕೆ ನನ್ನ ಮತ್ತು ಚಾಸಾ-11 ಇವರ ಸಹಿ ಪಡೆದು, ಆ ವೇಳೆ ಆರೋಪಿಯ ಸಹಿಯನ್ನು ಕೂಡ ಆ ದಾಖಲೆಗೆ ತೆಗೆದುಕೊಂಡು

ಅದೇ ಸಮಯದಲ್ಲಿ ನಿಪಿ–11 ರಿಂದ 14 ಎಂದು ಗುರುತಿಸಿದ ಫೋಟೋಗಳನ್ನು ಪೋಲೀಸರು ತೆಗೆಸಿರುವರು ಎಂದರೆ ಸರಿಯಲ್ಲ.

ಪೋಲೀಸರು ಆರೋಪಿ ತೋರಿಸಿದ ಸ್ಥಳ ಮತ್ತು ಅವಳು ಕೃತ್ಯಕ್ಕೆ ಬಳಸಿದ ಕೋಲನ್ನು ಹಾಜರುಪಡಿಸಿದ್ದನ್ನು ಮುಂದಿನ ಕ್ರಮಕ್ಕೆ ತೆಗೆದುಕೊಂಡ ಬಗ್ಗೆ ನನ್ನ ಮತ್ತು ಚಾಸಾ–11 ಹಾಗೂ ಆರೋಪಿಯ ಸಮಕ್ಷಮ ನಿಪಿ–10 ರಂತೆ ಪಂಚನಾಮೆಯನ್ನು ಬರೆದುಕೊಂಡು, ನಿಪಿ–11 ರಿಂದ 14 ಎಂದು ಗುರುತಿಸಿದ ಫೋಟೋಗಳನ್ನು ತೆಗೆಸಿದ್ದು ಮತ್ತು ಆ ವಿಷಯವೆಲ್ಲಾ ನನಗೆ ಗೊತ್ತಿದ್ದು, ಆದರೂ ಕೂಡ ಆರೋಪಿಯು ನಮ್ಮ ಊರಿನವರ ಇರುವ ಕಾರಣ ಆರೋಪಿಗೆ ಸಹಾಯ ಮಾಡಲು ಈಗ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿರುವೆನು ಎಂದರೆ ಸರಿಯಲ್ಲ. ನನಗೆ ಪಂಚನಾಮೆಯ ಬಗ್ಗೆ ಎಲ್ಲಾ ಮಾಹಿತಿ ಇದ್ದು, ಆದರೂ ಕೂಡ ಪೋಲೀಸರು ನನ್ನ ಮತ್ತು ಚಾಸಾ–11 ಇವರ ಸಮಕ್ಷಮ ಆರೋಪಿ ಹಾಜರುಪಡಿಸಿದ ಕೋಲನ್ನು ಪಂಚನಾಮೆಯಡಿ ಜಪ್ತುಗೊಳಿಸಿಲ್ಲವೆಂದು ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿರುವೆನು ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ.ಯು. ವಕೀಲರ ಪರ ಶ್ರೀ ಸಿ.ಟಿ. ವಕೀಲರಿಂದಃ**

ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.

ಮರು ವಿಚಾರಣೆ – ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.